# ಅನ್ನವೇ ದೈವ

'ಅನ್ನವನು ಇಕ್ಕುವುದು, ಇತರರಿಗೆ ಕೇಡಾಗದಂತೆ ನನ್ನಿಯನು ನುಡಿವುದು, ತನ್ನಂತೆ ಪರರ ಬಗೆವುದು' – ಈ ಎಲ್ಲವೂ ಸದ್ಧರ್ಮವೇ ಎಂದು ಕನ್ನಡದ ವಾಙ್ಮಯ ಹೇಳುತ್ತದೆ. ಹಾಗೆಯೇ ಹಸಿದವನಿಗೆ ಅನ್ನವನು ನೀಡುವುದು ರಾಜಧರ್ಮದ ಕರ್ತವ್ಯವೂ ಹೌದು ಎಂಬುದನ್ನು ಪ್ರಭುತ್ವವು ಮನಗಂಡಿದೆ. ಹಸಿದವರಿಗೆ ಅನ್ನ ನೀಡದ ಪ್ರಭುತ್ವವು ಕ್ರೂರವೂ ಹಾಗೂ ನಿರ್ಲಜ್ಜವೂ ಆಗಿರುತ್ತದೆ. ಇದನ್ನು ಮನಗಂಡೇ ಕರ್ನಾಟಕದಲ್ಲಿರುವ ಅನೇಕ ಮಠಮಾನ್ಯಗಳು ಶತಮಾನಗಳಿಂದಲೂ ಹಸಿದವರಿಗೆ 'ಅನ್ನ ದಾಸೋಹ'ದ ಹೆಸರಿನಲ್ಲಿ ಅನ್ನವನ್ನು ನೀಡುವುದು ಧರ್ಮದ ಒಂದು ಭಾಗವೆಂದೇ ತಿಳಿದಿವೆ. ಅನ್ನದ ಜೊತೆಗೆ ಅಕ್ಷರ ಜ್ಞಾನದ ದಾಸೋಹವನ್ನು ಎಲ್ಲ ಸಮುದಾಯದವರಿಗೂ ನಿರ್ವಂಚನೆಯಿಂದ ನೀಡುತ್ತಾ ಬರುತ್ತಿರುವುದು ನಾಡಿನ ಮಠಮಾನ್ಯಗಳ ಚರಿತ್ರೆಯ ಒಂದು ಭಾಗವೇ ಆಗಿದೆ. ಈ ಅನ್ನ ದಾಸೋಹದ ಕಲ್ಪನೆ ಕಾರ್ಯಗತಗೊಂಡಿರುವುದೂ ಇನ್ನೊಬ್ಬರ ಹಸಿವಿನ ತಳಮಳವನ್ನು ಬಲ್ಲ ದಯಾವಂತರಿಂದ.

ಸರ್ಕಾರದ ಕರ್ತವ್ಯಗಳಲ್ಲಿ ಜನತೆಗೆ ಆಹಾರ ಕೊಡುವುದು ಮೊದಲನೆಯದು. ಹೀಗೆ ಕೊಡುವುದರಿಂದ ಪ್ರಭುತ್ವದ ಮೇಲಿನ ಜನರ ವಿಶ್ವಾಸ ಕಡಿಮೆಯಾಗದಂತೆ ನೋಡಿಕೊಳ್ಳಬೇಕು ಎಂದು ಕನ್‌ಫ್ಯೂಷಿಯಸ್ ಹೇಳುತ್ತಾನೆ. ಜನತೆ ಸುಖಿಗಳಾಗುವುದು ಅನ್ನದಿಂದಲೇ ಹೊರತು ಬರಿಯ ಮಾತು, ಉಡುಗೆ ತೊಡುಗೆಗಳಿಂದಲ್ಲ! ಜಿಡ್ಡು ಕೃಷ್ಣಮೂರ್ತಿ ಹೇಳುವುದು ಇನ್ನೂ ಅರ್ಥಪೂರ್ಣ – 'ಅನ್ನ ಇರುವವನು ದೇವರಿಗಾಗಿ ಹುಡುಕುವುದಿಲ್ಲ, ಏಕೆಂದರೆ ಸಂತೋಷವೇ ದೇವರು'. ಹಸಿವು ಇಲ್ಲದಿರುವ ಸಮಾಜದಲ್ಲಿ ಕ್ರೌರ್ಯ, ಹಿಂಸೆ, ಅಪರಾಧಗಳ ಪ್ರಮಾಣವು ತಗ್ಗುತ್ತದೆ. ಹಸಿದವರಿಗೆ 'ಅನ್ನವೇ ದೈವ' ಎಂಬುದು ಲೋಕೋಕ್ತಿಯೇ ಆಗಿದೆ. ಹಸಿದವರಿಗೆ ಅನ್ನ ನೀಡದವರನ್ನು ಧರ್ಮವೇ ಸುಟ್ಟುಬಿಡುತ್ತದೆ! ಇದರಿಂದಾಗಿ ಪೈಶಾಚಿಕ ಸಮಾಜವೊಂದರ ಸೃಷ್ಟಿಗೆ ಪ್ರಭುತ್ವವೇ ಕಾರಣವಾಗಿಬಿಡಬಹುದು! ನಗು ಬಡವರ ಆತ್ಮದಂತೆ. ಬಡವರ ನಗುವಿಲ್ಲದ ಸಮಾಜ ಹೂ ಅರಳದ ಮರುಭೂಮಿಯಂತೆ. ಹೀಬ್ರೂ ಗಾದೆ ಹೇಳುತ್ತದೆ 'ಮನುಷ್ಯನ ಜೀವ ದೇವರ ದೀಪದಂತೆ'. ಇಂತಹ ದೇವರ ದೀಪವನ್ನು ಎಣ್ಣೆಯಿಲ್ಲದೆ ನಂದಲು ಪ್ರಭುತ್ವಗಳು ಎಂದಿಗೂ ಬಿಡಬಾರದು. ನಿಜವಾದ ದೇಶಪ್ರೇಮ ಎನ್ನುವುದು ತನ್ನ ಜನಗಳ ಹಿತವನ್ನು ಇತರರಿಗೆ ಕೇಡಾಗದಂತೆ ಕಾಪಾಡುವುದರಲ್ಲಿಯೇ ಮಗ್ನವಾಗಿರುತ್ತದೆ.

ಹೀಗೆ ಪಡೆಯುವವರು ಪ್ರಭುತ್ವದ ಮುಂದೆ ಕೀಳರಿಮೆಯಿಂದ ಶಿರ ಬಾಗಿಸಬೇಕಾಗಿಲ್ಲ! ನಾವು ಪ್ರಭುತ್ವವನ್ನು ಪೋಷಿಸುವ ತೆರಿಗೆದಾರರು, ಪಡೆಯುವುದು ನಮ್ಮ ಹಕ್ಕು ಎಂದೇ ತಿಳಿಯಬೇಕು. ಇದರಿಂದಾಗಿ ಬಡವರ ನಗು ಇರುವ ಸಮಾಜವೊಂದು ಅಸ್ತಿತ್ವಕ್ಕೆ ಬರುವುದನ್ನು ನಾವು ನೋಡಬಹುದು. ಹಾಗೆಯೇ ಯಾವುದೇ ಪ್ರಭುತ್ವವು ತನ್ನ ಪ್ರಜೆಗಳಿಗೆ ಕೊಡುವುದನ್ನು 'ದಾನ' ಎಂದು ಗರ್ವದಿಂದ ತಿಳಿಯಬೇಕಾಗಿಲ್ಲ! ಅದು ತನ್ನಪಾಲಿನ ಕರ್ತವ್ಯ ಎಂದೇ ಭಾವಿಸಬೇಕು. ಏಕೆಂದರೆ ಅಂತಿಮವಾಗಿ ಜನತೆಯಿಂದ ಪ್ರಭುತ್ವವೇ ಹೊರತು, ಪ್ರಭುತ್ವದಿಂದ ಜನತೆಯಲ್ಲ! ಸಂವೇದನಾಶೀಲತೆಯಿಲ್ಲದ ಪ್ರಭುತ್ವ ಮತ್ತು ಜಡ ಸಮಾಜವೊಂದರ ಮುಂದೆ ನಿಂತು ಹಸಿದ ಒಡಲೊಂದು ಕೇಳಿದ ಸಾರ್ವಕಾಲಿಕ ಕಠಿಣ ಪ್ರಶ್ನೆಯೊಂದು ಹೀಗಿದೆ: 'ಒಡಲುಗೊಂಡವ ಹಸಿವ / ಒಡಲುಗೊಂಡವ ಹುಸಿವ / ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ! / ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ' (ಜೇಡರ ದಾಸಿಮಯ್ಯ). ಎಲ್ಲ ಕಾಲದ ಬಡವರು ಕೇಳುವ ಪ್ರಶ್ನೆಯಿದು.

ಬಡವರು ಪ್ರಶ್ನಿಸುವುದು ಕೇವಲ ಒಂದ್ಹೊತ್ತಿನ ಅನ್ನಕ್ಕಾಗಿ ಅಲ್ಲ! ಈ ಪ್ರಶ್ನೆಯ ಆಳದಲ್ಲಿ ಸಮಾಜದಲ್ಲಿ ಮೇಲಿನಿಂದ ಕೆಳಕ್ಕೆ ಹಾಸುಹೊಕ್ಕಾಗಿರುವ ತರತಮ ಭಾವಗಳನ್ನು ಕುರಿತು ಕೇಳುವ ಪ್ರಶ್ನೆಯೇ ಆಗಿದೆ. 'ಒಂದೇ ನೆಲದಲ್ಲಿ ಒಬ್ಬ ಭಿಕ್ಷುಕ, ಇನ್ನೊಬ್ಬ ರಾಜ. ಒಬ್ಬನಿಗೆ ಪೀತಾಂಬರ ಉಡುಗೆ, ಇನ್ನೊಬ್ಬನಿಗೆ ತಲೆಗೊಂದು ಬಟ್ಟೆಯಿಲ್ಲ. ಒಬ್ಬನಿಗೆ ಮಹಲು, ಇನ್ನೊಬ್ಬನಿಗೆ ಬಿಸಿಲು' (ಅನು: ಕೃಷ್ಣ ಕೊಲ್ಹಾರ ಕುಲಕರ್ಣಿ). ಸೂಫಿ ಶಾಹ ಮಿರಾಂಜಿ ಕೇಳುವ ಅಸಮ ಸಮಾಜವನ್ನು ಕುರಿತ ಪ್ರಶ್ನೆ ಎಲ್ಲ ಕಾಲದಲ್ಲಿಯೂ ಉತ್ತರವಿಲ್ಲದ ಬಡವರ ಪ್ರಶ್ನೆಯಾಗಿಯೇ ಉಳಿದಿದೆ! ಇದಕ್ಕಿಂತ ದಾರುಣವೆಂದರೆ, ಬಡತನ ಮತ್ತು ಹಸಿವಿನಲ್ಲಿಯೇ ಮುಳುಗೇಳುವ ಜೀವವೊಂದರ ಹೇಳಲಾಗದ ಸಂಕಟವೊಂದನ್ನು ಕನ್ನಡದ ಜನಪದ ತ್ರಿಪದಿಯೊಂದು ಈಗಾಗಲೇ ಹಸಿವಿನ ಬೆಂಕಿಯಲಿ ದಗ್ಧವಾಗಿರುವ 'ಬಡವರಿಗೆ ಸಾವ ಕೊಡಬೇಡ...' ಎಂದು ದೇವರಲ್ಲಿ ಕೇಳಿಕೊಳ್ಳುತ್ತದೆ. ಆದ್ದರಿಂದ ಒಡಲು ಹೇಳುತ್ತದೆ, ಹಸಿದವರ ಪಾಲಿಗೆ ಅನ್ನದೇವರ ಮುಂದೆ ಇನ್ನೊಂದು ದೈವವಿಲ್ಲ ಎಂದು.

ಹಸಿದವನ ಸಂಕಟವನ್ನು ಹಸಿದವನೇ ಬಲ್ಲನು ಎಂಬುದು ಲೋಕದ ನುಡಿ. ಈ ಸಂಬಂಧದಲ್ಲಿ ಹಸಿವು ಮತ್ತು ಅನ್ನದ ಕೂಗು ಯಾರ ಕರುಳಿಗೆ ಬೇಗ ನಾಟುತ್ತದೆ ಎನ್ನುವುದನ್ನು 'ತಿರುಕ್ಕುರುಳ್' ಕುತೂಹಲಕಾರಿಯಾಗಿ ಮತ್ತು ಅಲಂಕಾರಿಕವಾಗಿ ಹೇಳುತ್ತದೆ: 'ತಪಸ್ವಿಗಳು ತಪಶಕ್ತಿಯಿಂದ ತಮ್ಮ ಹಸಿವನ್ನು ನೀಗಿಸಿಕೊಳ್ಳಬಲ್ಲರು. ಆದರೆ ಅವರು ಹಸಿದವರ ಹಸಿವನ್ನು ನೀಗಿಸಲಾರರು. ಗೃಹಸ್ಥನಾದವನು ತಾನೂ ಹಸಿದಿರದೆ, ಬೇರೆಯವರ ಹಸಿವನ್ನೂ ನೀಗಿಸಬಲ್ಲನು. ಆದ್ದರಿಂದ ತಪಸ್ವಿಯ ಶಕ್ತಿಗಿಂತ ಗೃಹಸ್ಥನ ಶಕ್ತಿಯೇ ಹೆಚ್ಚು' – ಇದು ಸಾಮಾಜಿಕವಾಗಿ ಸಮಷ್ಟಿಯ ಏಳ್ಗೆ ಮತ್ತು ಸಾಮರಸ್ಯದ ಭಾವವಾಗಿ ರೂಪುಗೊಳ್ಳುತ್ತದೆ. ಇಂತಹ ತಿಳಿವು ಯಾವುದೇ ಸಮಾಜದ ಉನ್ನತಿಗೆ ಅತ್ಯಗತ್ಯ. ಇದರಿಂದಾಗಿ ಸಹಿಷ್ಣುತೆ ಮತ್ತು ಸೋದರತ್ವದ ಭಾವಗಳು ಕಠಿಣ ಹೃದಯದ ಪ್ರಭುತ್ವಗಳನ್ನು ಬಡವರು ಮತ್ತು ಹಸಿದವರ ಪರವಾಗಿ ಕರುಣೆಯಿಂದ ನಡೆದುಕೊಳ್ಳುವುದನ್ನು ಕಲಿಸಬಲ್ಲವು.

ಬೇಂದ್ರೆ ಹೇಳುವಂತೆ 'ಭೂಮಿತಾಯಿಯು ಅಖಂಡವಾಗಿ ಮಾನವ ಕುಟುಂಬದ ಅನ್ನಕೋಶಗ್ರಹವಾಗದವರೆಗೆ ಅನ್ನ ಸಮಸ್ಯೆಯು ಬಿಡಿಸಬರದ ಗಂಟು: ಅಧರ್ಮವು ಕಟ್ಟಿಟ್ಟ ಮಾತು'. ಪ್ರಭುತ್ವವೊಂದು ಜನತೆಯ ವಿಶ್ವಾಸಾರ್ಹತೆಯನ್ನು ಗಳಿಸಿಕೊಂಡು ಮೆರೆಯಬೇಕಾದರೆ ಪಾಲಿಸಲೇ ಬೇಕಾದ 'ಧರ್ಮ' ಎಂದರೆ ಅನ್ನಕೋಶವನ್ನು ಸಮೃದ್ಧವಾಗಿಡುವುದೇ ಆಗಿದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಿಮಗೆ ಸೂರ್ಯನಂತೆ ಮಿಂಚುವ ಆಸೆಯಿದ್ದರೆ ಮೊದಲು ಸೂರ್ಯನಂತೆ ಉರಿಯುವುದನ್ನು ಕಲಿಯಿರಿ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯ ಬೇರೆ ಯಾರಿಗೂ ಇಲ್ಲ. ನಿಮ್ಮನ್ನು ಹಾಳು ಮಾಡುವ ಸಾಮರ್ಥ್ಯವಿರುವುದು ನಿಮಗೆ ಮಾತ್ರ.
  —ಸ್ವಾಮಿ ವಿವೇಕಾನಂದ
- ಸಾಮಾನ್ಯ ಜನರು ಮಾತ್ರ ಅಸಾಮಾನ್ಯ ಕೆಲಸಗಳನ್ನು ಮಾಡಬಲ್ಲರು.
  —ಜೋನಾಥನ್ ಡೈಯರ್
- ನೀವು ಮಾಡಬೇಕಾದ ಕೆಲಸ ನಿಮಗೆ ಮಾಡಲು ಸಾಧ್ಯ ಎಂದು ಮೊದಲು ಅಂದುಕೊಳ್ಳಿ, ಅರ್ಧ ಕೆಲಸ ಆದಂತೆ.
  —ಅನಾಮಿಕ
- ಎಲ್ಲ ಧರ್ಮಗಳೂ ಮನುಷ್ಯ ಧರ್ಮವೇ ಶ್ರೇಷ್ಠ ಎಂದಿವೆ. ಅರ್ಥೈಸಿಕೊಳ್ಳುವಲ್ಲಿ ಸೋತ ನಾವು ನಮ್ಮದೇ ಶ್ರೇಷ್ಠ ಎನ್ನುತ್ತೇವೆ.
  —ಕುವೆಂಪು
- ಸಾವಿಗೆ ನಾ ಹೆದರುವುದಿಲ್ಲ. ಯಾಕಂದರ ನಾ ಇರೋತನಕ ಅದು ಬರೋದಿಲ್ಲ. ಅದು ಬಂದಾಗ ನಾ ಇರೋದಿಲ್ಲ.
  —ದ.ರಾ. ಬೇಂದ್ರೆ
- ಬಾಳ್ವೆ ಇರುವುದು ಕಲಿಯುವುದಕ್ಕೆ, ಕಲಿತು ತಿದ್ದಿಕೊಳ್ಳುವುದಕ್ಕೆ, ತಿದ್ದಿ ತೃಪ್ತಿಪಡುವುದಕ್ಕೆ, ಬಾಳ್ವೆ ಇರುವುದು ಬದುಕುವುದಕ್ಕಾಗಿ.
  —ಶಿವರಾಮ ಕಾರಂತ